

ಗಿಬ್ಬನ್ನುಗಳ ಕುಟುಂಬದಲ್ಲಿ ಸಾಮಾನ್ಯವಾಗಿ ಒಂದು ಗಂಡು, ಒಂದು ಹೆಣ್ಣು ಮತ್ತು ಮರಿಗಳಿರುತ್ತವೆ. ಆ ಕುಟುಂಬವು ಅದಕ್ಕೆ ಬೇಕಾದ ಆಹಾರ ಮತ್ತು ರಕ್ಷಣೆಗೆ ನಿರ್ದಿಷ್ಟ ಪ್ರದೇಶವನ್ನು ಕಾಯ್ದಿರಿಸಿಕೊಂಡಿರುತ್ತದೆ. ಮರಗಳ ಮೇಲೆ ಸರಾಗವಾಗಿ ಚಲಿಸಲು ಮಾರ್ಪಾಡಾಗಿರುವ ಕೈಗಳು ಕಾಲಿಗಿಂತಲೂ ಉದ್ದನೆಯದಾಗಿರುತ್ತವೆ. ಬಯಲಿನಲ್ಲಿ ನಡೆದು ಕಾಲುದಾರಿಗಳಾದಂತೆ ಮರದ ಮೇಲೆ 'ಕೈದಾರಿ'ಗಳಿರುವುದನ್ನು ದುರ್ಬೀನಿನಲ್ಲಿ ನೋಡಿದೆವು. ಗಂಡು ಗಾಢ ಕಪ್ಪು ವರ್ಣದಾಗಿದ್ದು ಬೆಳ್ಳಗಿನ ಹುಬ್ಬು ತೀಡಿದಂತೆ ಕಾಣುತ್ತದೆ. ಆದರೆ ಹೆಣ್ಣು ಮಾತ್ರ ಕಂದು ಬಣ್ಣದ್ದಾಗಿರುತ್ತದೆ. ಹೆಣ್ಣು ಮತ್ತು ಗಂಡು ಸಾಮಾನ್ಯವಾಗಿ ಒಂದೇ ಸಮನಾದ ದೇಹದಾರ್ಢ್ಯ ಹೊಂದಿದ್ದು ಸುಮಾರು ಎಂಟರಿಂದ ಒಂಬತ್ತು ಕಿಲೋಗ್ರಾಂ ತೂಗುತ್ತವೆ.

ಗಿಬ್ಬನ್ ಕುಟುಂಬವಿದ್ದ ಮರದ ಬುಡ ತಲುಪಿದಾಕ್ಷಣ ಅವು ಕೂಗು ನಿಲ್ಲಿಸಿ ನಮ್ಮ ಚಲನವಲನಗಳನ್ನು ಅನುಮಾನದಿಂದ ವೀಕ್ಷಿಸುತ್ತಿದ್ದವು. ಆದರೆ ಮರಿ ಮಾತ್ರ ಮುಗ್ಧತೆಯಿಂದ ಕೊಂಬೆಗಳಲ್ಲಿ ಜೀಕುತ್ತಾ ಆಟವಾಡುತ್ತಿತ್ತು. ಸುಮಾರು ಅರ್ಧ ಗಂಟೆಯ ನಂತರ ಸ್ವಲ್ಪ ಸಾವರಿಸಿಕೊಂಡು ಮತ್ತೆ ಪಕ್ಕದ ಗುಂಪಿನೊಡನೆ ಸಂಭಾಷಣೆ ಆರಂಭಿಸಿದವು. ನಮಗೆ ಸಮಾಧಾನವಾಗುವಷ್ಟು ಚಿತ್ರಗಳನ್ನು ತೆಗೆದು ಅವುಗಳ ಕೂಗಾಟವನ್ನು ರೆಕಾರ್ಡ್ ಮಾಡಿಕೊಂಡು ಅಲ್ಲಿಂದ ಹೊರಟೆವು.

ಇಪ್ಪತ್ತೊಂದು ಚದರ ಕಿಲೋಮೀಟರ್ ವಿಸ್ತಾರದ ಪುಟ್ಟ ವನ್ಯಧಾಮ-ವಾದರೂ ಇಲ್ಲಿನ ಜೀವ ವೈವಿಧ್ಯತೆ ಮಾತ್ರ ಅಪಾರ. ಹುಲಿ, ಚಿರತೆ, ಮೂರು ವಿಧದ ಪುನುಗು ಬೆಕ್ಕುಗಳು, ಆನೆಗಳು, ಕಾಡು ಪಾಪ, ಇನ್ನೂರಕ್ಕೂ ಹೆಚ್ಚು ಪ್ರಭೇದದ ಹಕ್ಕಿಗಳು, ಲೆಕ್ಕವಿಲ್ಲದಷ್ಟು ಕೀಟ ಪ್ರಭೇದಗಳು– ಹೀಗೆ ಪಟ್ಟಿ ಬೆಳೆಯುತ್ತಾ ಸಾಗುತ್ತದೆ. 1880ರ ದಶಕದಲ್ಲಿ ಈ ಕಾಡಿನ ವೈವಿಧ್ಯತೆಯನ್ನು ಗುರುತಿಸಿದ ಬ್ರಿಟಿಷರು ಕಾಯ್ದಿಟ್ಟ ಅರಣ್ಯವೆಂದು ಘೋಷಣೆ ಮಾಡಿದ್ದರು. ವನ್ಯಧಾಮವೆಂಬ ಪಟ್ಟ ಸಿಕ್ಕಿದ್ದು ಮಾತ್ರ 1997ರಲ್ಲಿ. 2004ರಲ್ಲಿ 'ಹೊಲ್ಲಾಂಗ್ ಪಾರ್ ಗಿಬ್ಬನ್ ವನ್ಯಧಾಮ' ಎಂದು ಮರು ನಾಮಕರಣ ಮಾಡಿತು ಇಲ್ಲಿನ ಸರ್ಕಾರ.

ಗಿಬ್ಬನುಗಳು ಬ್ರಹ್ಮಪುತ್ರ ನದಿಯ ಪೂರ್ವ ಭಾಗದ ಕಾಡುಗಳು, ಬಾಂಗ್ಲಾ-ದೇಶದ ಲೋಹಿತ್ ಮತ್ತು ದಿಬಾಂಗ್ ನದಿಯ ಸುತ್ತ ಕಂಡುಬರುತ್ತವೆ. ಮಿಜೋರಾಂ, ಅರುಣಾಚಲ ಪ್ರದೇಶದ ಕಾಡುಗಳಲ್ಲೂ ಇವೆ. ಚೀನಾದ ಅಧೀನದಲ್ಲಿರುವ ಟಿಬೆಟ್ ಪ್ರಾಂತ್ಯದಲ್ಲಿ ಕೂಡ ಗಿಬ್ಬನುಗಳು ಕಂಡು ಬರುತ್ತವೆಂದು ಹೇಳಲಾಗುತ್ತದೆ.

ಅಂತರರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟದ (IUCN) ಪ್ರಕಾರ ಗಿಬ್ಬನುಗಳ ಸಂಖ್ಯೆ ಕಳೆದ ನಲವತ್ತು ವರ್ಷಗಳಲ್ಲಿ ಶೇಕಡಾ ಐವತ್ತರಷ್ಟು ಕಡಿಮೆಯಾಗಿದೆ ಹಾಗೂ ಕೆಂಪು ಪಟ್ಟಿಯ (IUCN– red list) ಪ್ರಕಾರ ಅಳಿವಿನಂಚಿನಲ್ಲಿರುವ ಪ್ರಾಣಿ. ಗಿಬ್ಬನುಗಳ ಸಂಖ್ಯೆ ಕ್ಷೀಣಿಸಲು ಬಹು ಮುಖ್ಯ ಕಾರಣಗಳೆಂದರೆ ಆವಾಸಸ್ಥಾನ ನಾಶವಾಗುತ್ತಿರುವುದು ಮತ್ತು ಅಕ್ರಮ ಬೇಟೆ.

## ಚಹಾ ಕ್ರಾಂತಿಯಿಂದ ಅವನತಿ

ಅಸ್ಸಾಂನಲ್ಲಿ ಮಾತ್ರ ಬೆಳೆಯುವ ಚಹಾ ಗಿಡಗಳನ್ನು ಗುರುತಿಸಿದ ಬ್ರಿಟಿಷರು ಚಹಾ ತೋಟಗಳನ್ನು ಬೆಳೆಯಲು ಪ್ರೋತ್ಸಾಹ ನೀಡಿದರು. 1830-40 ರ ದಶಕದಲ್ಲಿ ಆರಂಭವಾದ ಚಹಾ ಕ್ರಾಂತಿ ಅಸ್ಸಾಂ ಅನ್ನು ಪ್ರಪಂಚದ ಅತ್ಯಧಿಕ ಚಹಾ ಉತ್ಪಾದನಾ ಪ್ರದೇಶವಾಗಿಸಿತು. ಆದರೆ ಕಾಡುಗಳ ಜೀವ ವೈವಿಧ್ಯವನ್ನು ಅಧೋಗತಿಗೆ ನೂಕಿತು. ಇಂದು ಹೊಲ್ಲಾಂಗ್ ಪಾರ್ ವನ್ಯಧಾಮದ ಸುತ್ತಲೂ ಇರುವ ಚಹಾ ತೋಟಗಳು ಮತ್ತು ಹಳ್ಳಿಗಳು, ಇಲ್ಲಿನ ಕಾಡು ಪ್ರಾಣಿಗಳಿಗೆ ಪಕ್ಕದ ಕಾಡಿನ ಸಂಪರ್ಕವೇ ಇಲ್ಲದ ಹಾಗೆ ಮಾಡಿವೆ. ಕೆಲವೊಂದು ಪ್ರಾಣಿಗಳು ವಲಸೆ ಹೋಗಬಹುದಾದರೂ ಗಿಬ್ಬನುಗಳು ಮಾತ್ರ ಇಲ್ಲಿಯೇ ಜೀವಿಸಬೇಕು. ಅಕಸ್ಮಾತ್ ಧೈರ್ಯ ಮಾಡಿ ನೆಲಕ್ಕೆ ಇಳಿದರೆ ಬೀದಿನಾಯಿಗಳ ಪಾಲಾಗುವುದಂತೂ ಖಂಡಿತ.

ಒಂದು ಕಡೆ ಆವಾಸ ಸ್ಥಾನದ ಕೊರತೆಯಾದರೆ, ಇನ್ನೊಂದು ಕಡೆ ಬೇಟೆಗಾರರ ಹಾವಳಿ. ಬೇಟೆಗಾರರ ಉಪಟಳದ ತೀವ್ರತೆಯನ್ನು ಅರಿಯ-ಬೇಕಾದರೆ ಅರಣ್ಯ ಇಲಾಖೆಯ ಗಾರ್ಡುಗಳ ಹತ್ತಿರವಿರುವ ಸುಸಜ್ಜಿತ ಬಂದೂಕು ನೋಡಿದರೆ ಸಾಕು. ಅಸ್ಸಾಂ ಅರಣ್ಯ ಇಲಾಖೆಯು ಕಾಡು ಕಾಯಲು ವಿಶೇಷ ಕಾರ್ಯಪಡೆಯನ್ನು ರೂಪಿಸಿ ಭಾರತ ಸೈನ್ಯ ಉಪಯೋಗಿಸುತ್ತಿದ್ದ ಸೆಲ್ಫ್ ಲೋಡಿಂಗ್ ರೈಫಲ್ (ಮಶೀನ್ ಗನ್)ಗಳನ್ನು ಕೊಟ್ಟಿದೆ.

ಆವಾಸ ಸ್ಥಾನದ ಕೊರತೆ ಮತ್ತು ಬೇಟೆಗಾರರ ಹಾವಳಿಯ ಜೊತೆ ರೈಲೇ ಹಳಿಯ ಕಾಟ. ಇಷ್ಟೆಲ್ಲಾ ಜೀವ ವೈವಿಧ್ಯತೆಯಿಂದ ತುಂಬಿರುವ ಕಾಡಿನ ಮಧ್ಯೆ ಸಾಗುವ ರೈಲುಗಳು, ಆನೆಗಳಿಗೆ ಮೃತ್ಯು ಕೂಪವಾಗಿವೆ. ಚಿಕ್ಕ ಪುಟ್ಟ ವನ್ಯಜೀವಿಗಳ ಸಾವು ಯಾರ ಗಮನಕ್ಕೂ ಬರುವುದೇ ಇಲ್ಲ.

ಕಾಡಿನಿಂದ ವಾಪಸ್ಸಾಗುತ್ತಾ ಗಿಬ್ಬನುಗಳ ಬಗ್ಗೆ ಯೋಚಿಸುತ್ತಿರಬೇಕಾದರೆ, ಡಾ.ಮಹೇಶ್ ಒಂದು ಆತಂಕದ ಕಡೆಗೆ ಗಮನ ಸೆಳೆದರು. 'ಚಹಾ ತೋಟಗಳ ಮಧ್ಯೆ ದ್ವೀಪದಂತಾಗಿರುವ ಈ ಕಾಡಿನ ಗಿಬ್ಬನುಗಳು ತಮ್ಮ ಸೋದರ ಸಂಬಂಧದಲ್ಲೇ ವಂಶಾಭಿವೃದ್ಧಿ ಮಾಡುತ್ತಿವೆ. ಅಕಸ್ಮಾತ್ ಯಾವುದಾದರೂ ಸಾಂಕ್ರಾಮಿಕ ರೋಗ ಅಂಟಿಕೊಂಡರೆ ಇಲ್ಲಿರುವ ಎಲ್ಲಾ ಗಿಬ್ಬನುಗಳು ನಿರ್ನಾಮವಾಗುವುದು ಗ್ಯಾರಂಟಿ' ಎಂದರು. ಅಯ್ಯೋ! ಹಾಗೆ ಮಾತ್ರ ಆಗದಿರಲಿ.